‘‘ಸುಧಾಕರ, ನೀವು ಏಕೆ ಬಂದಿದ್ದೀರೆಂದು ನನಗೆ ಗೊತ್ತು. ನಾನು ಖಂಡಿತವಾಗಿಯೂ ನಿಮ್ಮ ಸಾಲ ಬಾಕಿ ಉಳಿಸುವುದಿಲ್ಲ... ನನಗೆ ಇನ್ನೂ ಕೊಂಚ ಸಮಯ ಕೊಡಿ ಸುಧಾಕರ...’’ ಬಪ್ತೀಸ ತುಂಬಾ ವಿನಮ್ರನಾಗಿ ಕೇಳಿಕೊಂಡ. ಸಾಲಕೊಟ್ಟವರ ಮುಂದೆ ನಡು ಬಗ್ಗಿಸಿ ವಿನೀತನಾಗಿ ನಿಲ್ಲವುದು ಅವನಿಗೆ ಅಭ್ಯಾಸವಾಗಿ ಹೋಗಿತ್ತು.

‘‘ಬಪ್ತೀಸ್ ಮಾಮ, ಇಲ್ಲ... ನಿಮಗೆ ಒಂದು ದಿನ ಏಕೆ, ಒಂದು ಘಂಟೆಯೂ ಹೆಚ್ಚಿಗೆ ಕೊಡುವುದಿಲ್ಲ. ನನಗೆ ಈಗಿಂದೀಗಲೇ ದುಡ್ಡು ಬೇಕು, ಅಂದರೆ ಬೇಕು! ಅದನ್ನು ವಸೂಲಿ ಮಾಡಿಯೇ ನಾನು ಇಲ್ಲಿಂದ ವಾಪಸ್ಸು ಹೋಗುವುದು... ನೀವು ಏನು ಬೇಕಾದರೂ ಮಾಡಿಕೊಳ್ಳಿ. ನನಗಿವತ್ತು ದುಡ್ಡು ಬೇಕೇ ಬೇಕು. ಅದನ್ನು ವಸೂಲಿ ಮಾಡಿಯೇ ನಾನು ಇಲ್ಲಿಂದ ಹೊರಡುವುದು. ಇಲ್ಲಿಯೇ ಕೂತಿರುತ್ತೇನೆ. ನಿಮ್ಮ ಮನೆಯವರ ಮೈಮೇಲಿನ ಬಂಗಾರವನ್ನಾದರೂ ಮಾರಿ, ಇಲ್ಲ ಸಾಲ ಮಾಡಿ ತನ್ನಿ. ನನ್ನ ದುಡ್ಡು ಇವತ್ತು ನನಗೆ ಬೇಕೇ ಬೇಕು.’’

ಬಪ್ತೀಸನಿಗೆ ಏನು ಮಾಡುವುದೆಂದೇ ತೋಚಲಿಲ್ಲ. ಸುಧಾಕರನನ್ನು ಅಂಗಳದಲ್ಲೇ ಇರಿಸಿ ಅವನು ಮಡದಿಯ ಬಳಿ ಮಾತನಾಡಲೆಂದು ಒಳಗೆ ಹೋದ.

ಸುಧಾಕರ ಹುಟ್ಟಾ ವ್ಯಾಪಾರಿ. ಒಂದು ರೂಪಾಯಿ ಹೂಡಿ ಮತ್ತೊಂದು ರೂಪಾಯಿ ಹುಟ್ಟಿಸುವ ಕಲೆ ಅವನಿಗೆ ಕರಗತವಾಗಿತ್ತು. ದುಡ್ಡಿಂದ ದುಡ್ಡು ದುಡಿಸುವ ಅವಕಾಶ ಎಂದೂ ಕಳೆದುಕೊಳ್ಳುತ್ತಿರಲಿಲ್ಲ. ಬಪ್ತೀಸ ಮನೆಯೊಳಗೆ ಹೋಗುತ್ತಿದ್ದಂತೆಯೇ ತೆರೆದ ಬಾಗಿಲಿನಿಂದ ಸುಧಾಕರನಿಗೆ ನಡುಕೋಣೆಯಲ್ಲಿ ಜೋಡಿಸಿಟ್ಟ ಕಿರಿಸ್ತಾನರ ಅಸಂಖ್ಯಾತ ಇಮಾಜುಗಳು ಕಂಡವು. ಅವನ ವ್ಯಾಪಾರಿ ಮಿದುಳಿನೊಳಗೆ ದುಡ್ಡು ಮಾಡುವ ಒಂದು ಹೊಸ ವಿಚಾರ ಮಿಂಚಿನಂತೆ ಮೊಳಕೆಯೊಡೆಯಿತು.

‘‘ಬತ್ತು ಮಾಮಾ...’’ ಒಳಗಡೆ ಹೋಗಿದ್ದ ಬಪ್ತೀಸನಿಗೆ ಸುಧಾಕರ ಜೋರಾಗಿ ಕೂಗಿ ಕರೆದ. ಬಪ್ತೀಸ ತಕ್ಷಣ ಹೊರಗೆ ಬಂದ.

‘‘ನನಗೆ ಗೊತ್ತು ಬಪ್ತೀಸ, ನೀನೊಬ್ಬ ಪಾಪದ ಮನುಷ್ಯ. ಆದರೂ ಬುದ್ಧಿವಂತ. ನಿನ್ನ ಹಣಕಾಸು ವಿಚಾರ ನೆನೆಸಿಕೊಂಡರೆ ನನಗೆ ಬೇಜಾರಾಗುತ್ತದೆ. ಎಷ್ಟು ದಿನ ಅಂತ ಹೀಗೆ ದಿನ ದೂಡುತ್ತಿ? ಶಾಲೆಗೆ ಹೋಗೋ ಮಕ್ಕಳು ಬೇರೆ! ಹೇಗೂ ನಿನ್ನ ಕೈಯಲ್ಲಿ ದೇವರು ಕೊಟ್ಟ ಒಂದು ಕಲೆ ಇದೆ. ನನ್ನದೊಂದು ಆಲೋಚನೆ ಇದೆ ಕೇಳು... ನಮ್ಮ ಗಣೇಶನ ಹಬ್ಬ ಇನ್ನೇನು ಬಂದೇ ಬಿಡುತ್ತದೆ. ನೀನು ನಮ್ಮ ಗಣೇಶನ ಮೂರ್ತಿಗಳನ್ನು ಮಾಡು. ನಿನಗೆ ಭರ್ಜರಿ ವ್ಯಾಪಾರವಾಗುವುದಂತೂ ಖಂಡಿತ. ಈಗಿಂದೀಗಲೇ ನಾನೇ ನಿನಗೆ ನೂರು ಗಣೇಶನ ಮೂರ್ತಿಗಳ ಆರ್ಡರ್ ಕೊಡುತ್ತೇನೆ. ಏನಂತೀಯಾ?’’

ಸುಧಾಕರ ಹೇಳಿದ್ದು ಬಪ್ತೀಸನ ತಲೆಯೊಳಗೆ ನಿಧಾನವಾಗಿ ಇಳಿಯಿತು. ಮಿದುಳಿಗೆ ಇಳಿದದ್ದು ಹೃದಯಕ್ಕೆ ನಾಟಿದಾಗ ಅವನು ಮೆಲ್ಲಗೆ ಕಂಪಿಸಿದ. ಇಷ್ಟು ವರ್ಷಗಳಿಂದ ನಂಬಿಕೊಂಡಿದ್ದ ದೇವರು ಮತ್ತು ಇಗರ್ಜಿಯ ಸಾಧು ಸಂತ ಭಕ್ತರನ್ನು ತೊರೆದು ಅಪರಿಚಿತ ದೇವರ ಮೂರ್ತಿಯನ್ನು ಮಾಡುವುದು ಅವನಿಗೆ ಕಲ್ಪಿಸಿಕೊಳ್ಳಲು ಆಗಲೇ ಇಲ್ಲ. ಇದು ತನ್ನ ಅವನತಿ ಎಂದೇ ಅವನಿಗೆ ಅನಿಸತೊಡಗಿತು.

‘‘ಈ ಒಂದು ಕೆಲಸ ನನ್ನಿಂದಾಗೋದಿಲ್ಲ ಸುಧಾಕರ. ನನ್ನ ಕುಟುಂಬದ ಹೊಟ್ಟೆಪಾಡಿಗೋಸ್ಕರ ಈವರೆಗೂ ನಂಬಿಕೊಂಡು ಬಂದಿರುವ ದೇವರಿಗೆ ದ್ರೋಹ ಬಗೆಯುವ ಕೆಲಸ ಬಿಲ್ಕುಲ್ ನನ್ನಿಂದಾಗದು.’’

‘‘ನಿನ್ನಿಷ್ಟ ಬತ್ತು ಮಾಮ! ದೇವರು ನಿನ್ನ ಸಂಕಟ ನೋಡಲಾಗದೆ ಒಂದು ಹೊಸ ಹಾದಿಯನ್ನು ತೋರಿಸಿದ. ಆದರೆ, ನಿನಗದು ಬೇಡ! ನಿನ್ನಿಷ್ಟದಂತೆಯೇ ಆಗಲಿ. ಆದರೂ ನೀನು ಗಣೇಶನ ಮೂರ್ತಿ